ಮೈಸೂರು ಶೀಮೆಯ ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್ ಸಾಹೆಬರಿಂದ ಕೊಡಲ್ಪಟ್ಟ ನೋಟೀಸು.

ಬೆಂಗಳೂರು ತಾರೀಖು 12ನೇ ಆಗಸ್ಟ್ 1890ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ದಾವಣಿಗೆರೆ ತಾಲ್ಲೂಕು ಹುಲಗಿನ ಹೊಳೆ ಗ್ರಾಮದ ಸಮೀಪದಲ್ಲಿ ತುಂಗಭದ್ರಾ ನದಿಯಲ್ಲಿ ತೇಲಿಬಂದ ಇದರಡಿ ನಮೂದಿಸಿರುವ ಅಳತೆ ಉಳ್ಳ 103ನೇ ನಂಬರ್ ಕರೆಮುತ್ತಿ ನಾಟ ಸಿಕ್ಕಿರುತ್ತೆ.

ಲಾಂಬಿ	21½ ಅಡಿ.
ಬುಡದ ಸುತ್ತಳತೆ	5 ಡಿಟೋ
ಮೇಲಭಾಗದ ಸುತ್ತಳತೆ	4 ಡಿಟೋ

ಮೇಲ್ಕಂಡ ನಾಟ ಹೂಲಗಿನ ಹೊಳೆ ಗ್ರಾಮದ ಪಟೇಲನ ವಶದಲ್ಲಿರುತ್ತೆ, ಈ ನೋಟೀಸು ಗೆಜೆಟ್ಟಿನಲ್ಲಿ ಪ್ರಾಯಿಷ್ ಆದ 2 ತಿಂಗಳ ವಳಗಾಗಿ ಸದರೀ ನಾಟುವಿಗೆ ಹಕ್ಕ ದಾರಿಯುಳ್ಳವರು ತಿವಮೊಗ್ಗಾ ಡಿಸ್ಟ್ರಿಕ್ಟು ಫಾರೆಸ್ಟ್ ಆಫೀಸರಲ್ಲಿ ಜಾಹಿರ್ ಮಾಡಿಕೊಳ್ಳಬೇಕು. ಈ ವಾಯಿದೆ ತರುವಾಯ ಯಾವ ಹಕ್ಕು ದಾರಿಯು ಅಂಗೀಕರಿಸಲ್ಪಡುವದಿಲ್ಲ, ಸದರೀ ನಾಟುಕ್ಕೆ ಯಾರು ಹಕ್ಕದಾರಿ ಸ್ಥಿರಪಡಿಸಿ ಕೊಳ್ಳದೆ ಹೋಲ್ಲಿ ಆದು ಸರಕಾರಕ್ಕೊಸ್ಕರ ಹರಾಜು ಮಾಡಲ್ಪಡುವದು.

ಫಾರೆಸ್ಟ್ ಇಲಾಖೆ.

ತಾರೀಖು 29ನೇ ಆಗಸ್ಟು 1890.

ಸ್ ೧೮೭೮ನೇ ಇಸವಿ ಫಾರೆಸ್ಟ್ ರೂಲ್ಸ್ 9ನೇ ಸೆಕ್ಷನ್ ಅನುಸರಿಸಿ ಈ ಕೆಳಗೆ ನಮೂದಿಸಿ ಯಿರುವ ಮನ್ನಾ ಜಂಗ್ಲಿಯು ಜತ್ರುಗಡಿಗಳೂ—ಸಕಲ ಜನರ ತಿಳವಳಿಕೆ ಬಗ್ಯೆ ಪ್ರಕಟಿಸಲ್ಪಟ್ಟಿರುತ್ತವೆ.

ಕರಡಿಬೆಟ್ಟು—ಮನ್ನಾ ಜಂಗ್ಲಿ.

ತಿಕಾರಿಪುರ ತಾಲ್ಲೂಕು ಮತ್ತು ಕುಂಸಿ ಸಬ್ ತಾಲ್ಲೂಕು ಯಿದರ ವಿಸ್ತೀರ್ಣಸುಮಾರು 32 ಚದರ ಮೈಲು.

ಉತ್ತರಕ್ಕೆ—ಕಡದಿರತಕ್ಕ ಡಿವಾರ್‌ಕೇರ್ಷ ರಸ್ತೆಯೂ ಹಿರೆಹಾರಕ ಭೈರಾಪುರ, ಮತ್ತು ಗಾಜ ಈ ಮೂರು ಗ್ರಾಮಗಳ ಗಡಿ ಬಾಂದಿನಿಂದ ಪುರು ಆಗಿ ತಿಕಾರಿಪುರದಿಂದ ಅನಂತಪುರಕ್ಕೆ ಹೋಗುವ ಗಾಡಿ ದಾರಿಯನ್ನು ಕೇರಿ ಅದೆ ದಾರಿ ಹಿಡದು ಭೈರಪುರ ಹರಿಹರ ಪುರ ಈ ಗ್ರಾಮಗಳ ಗಡಿಗೆ ಕೇರಿ ಅಲ್ಲಿಂದ ಮಂಡ್ರವಳ್ಳಿ ಹುಣಸೆಕೊಪ್ಪ, ಮತ್ತು ಕಲ್ಲಿಮನೆ ಈ 3 ಗ್ರಾಮಗಳ ಗಡಿ ಬಾಂದುಗಳ ವರಿಗೆ ಹೋಗಿ ಕೇರುತ್ತದೆ.

ಪೂರ್ವಕ್ಕೆ—ಮೇಲೆ ನಮೂದಾದ ಆಖ್ಯೆರುಗಡಿ ಬಾಂದುನಿಂದ ಕುಮದ್ವತಿ ನದಿಯನ್ನ ಕೇರಿ ಡಿವಾರಕೇರ್ಷ ಲೈನ್ ಅನೆ ನದಿ ವಾರೆ ಹಿಡಿದು ಜೊರಡಿ ಕಲ್ಲವನೇ ಗ್ರಾಮಗಳ ಗಡಿವರಿಗೆ ಹೋಗಿ ಕೇರುತ್ತದೆ.

ದಕ್ಷಿಣಕ್ಕೆ—ಮೇಲ್ಕಂಡ ಗಡಿಯಿಂದ ಡಿವಾರ್‌ಕೇರ್ಷ ಲೈನ್ ಪುರುಆಗಿ ಕುಣಿ ಹೊಸೂರು, ಹಿರೆಹಾರಕ ಮತ್ತು ತಂಗ್ಲವಾಡಿ ಈ ಮೂರು ಗ್ರಾಮಗಳ ಗಡಿ ಬಾಂದುಗಳನ್ನ ಕೇರುತ್ತದೆ.

ಪಶ್ಚಿಮಕ್ಕೆ—ಮೇಲೆ ಕಂಡ ಬಾಂದುಗಳಿಂದ ಡಿವಾರ್‌ಕೇರ್ಷ ಲೈನ್ ಪುರು ಹೊರಟ ಸ್ಥಳಕ್ಕೆ ಬಂದುಕೂಡತ್ತದೆ.

II ಚಂದ್ರಗುತ್ತಿ ಮನ್ನಾ ಜಂಗ್ಲಿ.

ಸೊರಬ ತಾಲ್ಲೂಕು.

ಉತ್ತರಕ್ಕೆ—ವಿಸ್ತೀರಣ ಸುಮಾರು 7½ ಚದರ ಮೈಲ್ ಕಡದು ಇರತಕ್ಕ ಡಿವಾರ್‌ಕೇರ್ಷ ರಸ್ತೆಯಲ್ಲಿ ಕೊಡಂಬೀ ದೊಡ್ಡಜೆಡಿ; ಸುರಗಿಕೊಪ್ಪ ಈ ಗ್ರಾಮಗಳ ಗಡಿ ಬಾಂದುಗಳಿಂದ ಪುರುಆಗಿ ಚಂದ್ರಗುತ್ತಿ ಕವಲಾಪುರ ಬಗರವಳ್ಳಿ ಈ ಗ್ರಾಮದ ಗಡಿಬಾಂದು ಗಳನ್ನು ಕೇರುತ್ತದೆ.

ಪೂರ್ವಕ್ಕೆ—ಕಡದು ಯಿರತಕ್ಕ ಡಿವಾರ್‌ಕೇರ್ಷ ರಸ್ತೆಯೂ ಮೇಲೆ ನಮೂದಾದ ಆಖ್ಯೆರು ಬಾಂದುಗಳಿಂದ ಚಂದ್ರಗುತ್ತಿ ಬಸ್ತೆಕೊಪ್ಪ ಕತವಾಯಿ ಈ ಗ್ರಾಮಗಳ ಗಡಿ ಬಾಂದು ಕೇರುತ್ತದೆ.

ದಕ್ಷಿಣಕ್ಕೆ—ಕಡದುಯಿರತಕ್ಕ ಡಿವಾರ್‌ಕೇರ್ಷ ರಸ್ತೆಯೂ ಮೇಲೆ ನಮೂದಾದ ಆಖ್ಯೆರು ಬಾಂದುಗಳಿಂದ ಕೊಡಂಬೀ, ನಿಡಗೊಡು ಕುಮರೆಗೊಡು ಈ ಗ್ರಾಮಗಳ ಗಡಿ ಬಾಂದುಗಳನ್ನು ಕೇರುತ್ತದೆ.

ಪಶ್ಚಿಮಕ್ಕೆ—ಕಡದುಯಿರತಕ್ಕ ಡಿವಾರ್‌ಕೇರ್ಷ ರಸ್ತೆಯೂ ಮೇಲೆ ನಮೂದಾದ ಡಿವಾರ್‌ಕೇರ್ಷ ರಸ್ತೆಯೂ ಆಖ್ಯೆರು ಬಾಂದುಗಳಿಂದ ಪ್ರಾರಂಭಿಸಿ ಯಿರುವ ಬಾಂದುಗಳನ್ನು ಕೇರುತ್ತದೆ.

ಎಲ್. ರಿಕ್ಕೆಟ್ಸ್,
ಫಾರೆಸ್ಟ್ ಇನ್‌ಸ್ಪೆಕ್ಟರ್, ಜನರಲ್.